*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

4. ದಿಃ 19-11-2021 ರಂದು ಬೆಳಿಗ್ಗೆ 8.30 ಗಂಟೆಯಿಂದ ನಾನು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೆನು. ಪ್ರತಿದಿನ ಬೆಳಿಗ್ಗೆ 7.30 ಗಂಟೆಗೆ ಠಾಣೆಯಲ್ಲಿ ರೋಲ್ ಕಾಲ್ ಮಾಡಲಾಗುತ್ತದೆ ಎಂದರೆ ಸಾಕ್ಷಿ ಆ ದಿನ ಬೆಳಿಗ್ಗೆ 8.30 ಗಂಟೆಗೆ ಮಾಡಲಾಯಿತು ಎನ್ನುತ್ತಾರೆ. ನೀವು ಆ ದಿನ ಠಾಣಾಧಿಕಾರಿಯ ಕರ್ತವ್ಯವನ್ನು ಯಾರಿಂದ ಪಡೆದಿದ್ದೀರಿ ಎಂದರೆ ಸಾಕ್ಷಿ ಚಾಸಾ.39 ರವರಿಂದ ಎನ್ನುತ್ತಾರೆ.

5. ದಿಃ 19-11-2021 ರಂದು ಬೆಳಿಗ್ಗೆ 9 ಗಂಟೆಗೆ ಫ್ರಾಸಾ.2 ರವರು ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದಾಗಿ ಹೇಳಿದ್ದೀರಿ ಅದರ ಪೂರ್ವದಲ್ಲಿ ನೀವು ಠಾಣಾಧಿಕಾರಿಯ ಕರ್ತವ್ಯವನ್ನು ವಹಿಸಿಕೊಂಡ ಬಳಿಕ ಅವರು ನಿಮ್ಮ ಠಾಣೆಗೆ ಬಂದಿದ್ದರೇ ಎಂದರೆ ಸಾಕ್ಷಿ ಅವರು ಠಾಣೆಗೆ ಬಂದಿದ್ದೇ ಬೆಳಿಗ್ಗೆ 9 ಗಂಟೆಗೆ ಎನ್ನುತ್ತಾರೆ. ಯಾವುದೇ ಘೋರ ಅಪರಾಧದ ಬಗ್ಗೆ ಮಾಹಿತಿ ಬಂದ ಕೂಡಲೇ ನೀವು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಬೇಕಾಗುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ಕೊಟ್ಟು ನಂತರ ಪ್ರಥಮ

ವರ್ತಮಾನ ವರದಿಯನ್ನು ದಾಖಲು ಮಾಡುತ್ತೇವೆ ಎನ್ನುತ್ತಾರೆ. ಫ್ರಾಸಾ.2 ರವರು ಹಾಜರಾಗಿ ದೂರನ್ನು ನೀಡಿದ್ದಾಗಿ ಹೇಳಿದ್ದೀರಿ ಅದರ ಪೂರ್ವದಲ್ಲಿ ಘಟನೆಯ ಬಗ್ಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ನನಗೆ ಇರಲಿಲ್ಲ ಎನ್ನುತ್ತಾರೆ.

6. ನಿಮ್ಮ ಠಾಣೆಯಿಂದ ಚಿಕ್ಕಮಗಳೂರು ನ್ಯಾಯಾಲಯಕ್ಕೆ ಮತ್ತು ನ್ಯಾಯಾಧೀಶರವರ ವಸತಿ ಗೃಹಕ್ಕೆ 2 ಕಿ.ಮೀ ದೂರವಾಗುತ್ತದೆ ಎಂದರೆ ಸರಿ. ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಕೂಡಲೇ ಸಾಧ್ಯವಾದಷ್ಟು ಬೇಗ ಅದನ್ನು ನ್ಯಾಯಾಲಯಕ್ಕೆ ತಲುಪಿಸಬೇಕೆಂದು ನಿಮಗೆ ನಿರ್ದೇಶನ ಇದೆ ಎಂದರೆ ಸರಿ. ಪ್ರಥಮ ವರ್ತಮಾನ ವರದಿಯನ್ನು ನೀವು ಯಾರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಚಾಸಾ.33 ಹೆಚ್.ಸಿ.112 ರಾಜನಾಯ್ಕರವರ ಮುಖಾಂತರ ಎನ್ನುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಕೂಡಲೇ ಸಾಧ್ಯವಾದಷ್ಟು ಬೇಗ ಅದನ್ನು ನ್ಯಾಯಾಲಯಕ್ಕೆ ತಲುಪಿಸಬೇಕೆಂದು ನೀವು ಅವರಿಗೆ ಸೂಚಿಸಿದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

7. ಆ ದಿನ ನೀವು ಎಷ್ಟು ಗಂಟೆಯವರೆಗೆ ಠಾಣಾಧಿಕಾರಿಯಾಗಿ ಮುಂದುವರೆದಿದ್ದೀರಿ ಎಂದರೆ ಸಾಕ್ಷಿ ರಾತ್ರಿ 9 ಗಂಟೆಯವರೆಗೆ ಎನ್ನುತ್ತಾರೆ. ಚಾಸಾ.33 ರವರು ಎಷ್ಟು ಗಂಟೆಗೆ ನ್ಯಾಯಾಧೀಶರಿಗೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ ನಿಮಗೆ ವರದಿ ಮಾಡಿಕೊಂಡರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಎಷ್ಟು ಗಂಟೆಗೆ ನ್ಯಾಯಾಧೀಶರಿಗೆ ತಲುಪಿಸಿದ್ದಾಗಿ ಅವರು ನಿಮಗೆ ತಿಳಿಸಿದರು ಎಂದರೆ ಸಾಕ್ಷಿ ತಲುಪಿಸಿದ್ದಾಗಿ ತಿಳಿಸಿದ್ದಾರೆ ಆದರೆ ಎಷ್ಟು ಗಂಟೆಗೆ ಎಂದು ತಿಳಿಸಿಲ್ಲ ಎನ್ನುತ್ತಾರೆ.

8. ಸಾಮಾನ್ಯವಾಗಿ ಪ್ರತಿದಿನ ರಾತ್ರಿ 7.30 ಗಂಟೆಗೆ ರೋಲ್ ಕಾಲ್ ಆಗುತ್ತದೆ ಎಂದರೆ ಸಾಕ್ಷಿ ಸಾಮಾನ್ಯವಾಗಿ ಆಗುತ್ತದೆ ಆದರೆ ಬಂದೋಬಸ್ತ್, ತುರ್ತು ಪರಿಸ್ಥಿತಿ ಇದ್ದ ಸಮಯದಲ್ಲಿ ನಿರ್ದಿಷ್ಟ ಸಮಯಕ್ಕೆ ರೋಲ್ ಕಾಲ್ ಮಾಡಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ. ಆ ದಿನ ರಾತ್ರಿ ರೋಲ್ ಕಾಲ್ ಮಾಡಲಾಯಿತೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

9. ದೂರನ್ನು ಸ್ವೀಕರಿಸಿದ ಬಗ್ಗೆ ಠಾಣೆಯ ಸೀಲನ್ನು ಲಗತ್ತಿಸಿ ಸಹಿ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ಸೀಲನ್ನು ಹಾಕುವುದಿಲ್ಲ, ಆದರೆ ದೂರನ್ನು ಸ್ವೀಕರಿಸುವವರು ಅದರ ಮೇಲೆ ಹಿಂಬರಹ ಮಾಡಿ ಸಹಿ ಮಾಡುತ್ತಾರೆ ಎನ್ನುತ್ತಾರೆ.  ಎಷ್ಟು ಗಂಟೆಗೆ ಮತ್ತು ಎಲ್ಲಿ ನೀವು ಪ್ರಕರಣದ ಕಡತವನ್ನು ಚಾಸಾ.39 ರವರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದ ಕೂಡಲೇ ಕಡತವನ್ನು ಚಾಸಾ.39 ರವರಿಗೆ ಠಾಣೆಯಲ್ಲಿ ಕೊಟ್ಟಿದ್ದೇನೆ ಎನ್ನುತ್ತಾರೆ. ಪ್ರಕರಣ ದಾಖಲಾದ ಬಳಿಕ ಅದಕ್ಕೆ ಸಂಬಂಧಿಸಿದ ಡೈರಿಯನ್ನು ನಿರ್ವಹಿಸಬೇಕಾಗುತ್ತದೆ ಎಂದರೆ ಸರಿ. ಎಷ್ಟು ಗಂಟೆಗೆ ಕಡತವನ್ನು ಚಾಸಾ.39 ರವರಿಗೆ ನೀಡಲಾಯಿತು ಎಂದು ಡೈರಿಯಲ್ಲಿ ನಮೂದಿಸಿದ್ದೀರಿ ಎಂದರೆ ಸಾಕ್ಷಿ ಡೈರಿಯನ್ನು ನೋಡಿ ಹೇಳಬೇಕಾಗುತ್ತದೆ, ನಾನು ಈ ದಿನ ಡೈರಿಯನ್ನು ತಂದಿಲ್ಲ ಎನ್ನುತ್ತಾರೆ.

10. ನಿಮ್ಮ ಮೇಲಾಧಿಕಾರಿಗಳು ತಯಾರಿಸಿದ ನಿಪಿ.6 ಮತ್ತು ಪಿ.7 ದಾಖಲೆಗಳಿಗೆ ನೀವು ಎಲ್ಲೋ ಇದ್ದುಕೊಂಡು ಸಹಿ ಮಾಡಿದ್ದೀರಿ ಹೊರತು ನೀವು ನಿಪಿ.6 ರಂತೆ ಯಾವುದೇ ದೂರನ್ನು ಸ್ವೀಕರಿಸಿಲ್ಲ

ಮತ್ತು ನಿಪಿ.7 ರಂತೆ ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ.6 ದೂರನ್ನು ಎಲ್ಲಿ ತಯಾರಿಸಲಾಯಿತು ಎಂದು ನನಗೆ ಗೊತ್ತಿಲ್ಲ. ಫ್ರಾಸಾ.2 ರವರು ನಿಪಿ.6 ರಂತೆ ನಿಮಗೆ ಯಾವುದೇ ದೂರನ್ನು ನೀಡದೇ ಇದ್ದರೂ ಸಹ ನಿಪಿ.7 ರಂತೆ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ